ಅ) ಹೌದು ಖಾಲಿಯಿರುವ ವಿವಿಧ ವರ್ಗಗಳ ಒಟ್ಟು ಹುದ್ದೆಗಳ ಸಂಖ್ಯೆ 467.

ಆ) ಹೌದು.

ಇ) ಸರ್ಕಾರವು ಈ ನೇರ ನೇಮಕಾತಿಯನ್ನು ನಿಲ್ಲಿಸಬೇಕೆಂದು ಮಂಡಳಿಗೆ ಸೂಚನೆ ನೀಡಿದೆ. ಈ ಮಧ್ಯೆ ಮಂಡಳಿಯ ಕೋರಿಕೆಯಂತೆ ಈ ನಿರ್ಬಂಧವನ್ನು ಸಡಿಲಿಸುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸಹಕಾರಿ ಸಂಘಗಳಿಗೆ ಸರ್ಕಾರದಿಂದ ಬರಬೇಕಾದ ಬಾಕಿ ಹಣದ ಬಗ್ಗೆ.

2676 - ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಸಗಟು ವ್ಯಾಪಾರದಲ್ಲಿ ಕೇಂದ್ರ ಸರ್ಕಾರದ ಸಕ್ಕರೆ ನೀತಿಯಿಂದಾಗಿ ಇಡೀ ರಾಜ್ಯದ ಸಹಕಾರಿ ಸಂಘಗಳಿಗೆ ರಾಜ್ಯ ಸರ್ಕಾರದಿಂದ ಬರಬೇಕಾದ ಹಣವೆಷ್ಟು?

ಆ) ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳಿಗೆ ಬರಬೇಕಾದ ಹಣವೆಷ್ಟು?

ಇ) ಹಾಗೂ ಸರ್ಕಾರ ಬಾಕಿ ಹಣವನ್ನು ಎಂದು ಪಾವತಿ ಮಾಡುವುದು?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ರೂ. 403.15 ಲಕ್ಷ ರೂಪಾಯಿಗಳು

ಆ) ರೂ. 64.86 ಲಕ್ಷ ರೂಪಾಯಿಗಳು

ಇ) ಆದಷ್ಟು ಜಾಗ್ರತವಾಗಿ ಬಾಕಿ ಹಣವನ್ನು ಪಾವತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯನ್ನು ಹೋಗಲಾಡಿಸುವ ಬಗ್ಗೆ

2804 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡದಲ್ಲಿ ಶಿಕ್ಷಕರ ಕೊರತೆ ಇರುವ ಪ್ರಾಥಮಿಕ, ಮಾಧ್ಯಮಿಕ ಪ್ರೌಢ ಶಾಲೆಗಳೆಷ್ಟು (ಅವುಗಳ ವಿವರ ಬೇಕು)?

ಆ) ಶಿಕ್ಷಕರ ಕೊರತೆ ಇರುವ ಈ ಶಾಲೆಗಳಿಗೆ ಶಿಕ್ಷಕರನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಈ ಶಿಕ್ಷಕರ ಕೊರತೆಯು ಯಾವಾಗ ಇಲ್ಲವಾಗಿ ಪರಿಪೂರ್ಣತೆಗೆ ಬರುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ 661 ಶಿಕ್ಷಕರ ಕೊರತೆ ಇರುತ್ತದೆ. (ಮಕ್ಕಳು ಉಪಾಧ್ಯಾಯರ 1:50ರ ಅನುಪಾತದಂತೆ) ಸರ್ಕಾರಿ ಪ್ರೌಢ ಶಾಲೆಗಳಲ್ಲಿ 97 ಶಿಕ್ಷಕರ ಕೊರತೆ ಇದೆ. ಶಾಲೆಗಳ ವಿವರಗಳನ್ನು ಪಡೆದು ಒದಗಿಸಲಾಗುವುದು.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 276 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಶೀಘ್ರದಲ್ಲಿಯೇ ಭರ್ತಿಮಾಡಲಾಗುವುದು. ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅವರ ವಿದ್ಯಾರ್ಹತೆ ಮತ್ತು ಸೇವಾ ಜೇಷ್ಠತೆಯ ಮೇರೆಗೆ ಬಡ್ತಿ ನೀತಿ ಹಾಗೂ ಮಿತವೇತನ (ಸ್ಟೈಪಂಡರಿ) ಪದವೀಧರರಿಂದ ತುಂಬಲು ಈಗಾಗಲೇ ಕ್ರಮಕೈಗೊಳ್ಳಲಾಗಿದೆ.

ಇ) ಕಾಲಮಿತಿ ಹೇಳಲಾಗದು.

ತರೀಕೆರೆ ಬಸ್ಸು ನಿಲ್ದಾಣದ ದುರಸ್ತಿ ಬಗ್ಗೆ

2814 - ಡಾ. ಹೆಚ್.ಆರ್. ರಾಜು (ತರೀಕೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ನಗರದ ಬಸ್ ನಿಲ್ದಾಣಕ್ಕೆ ಅಗತ್ಯವಿರುವ ರಸ್ತೆ ಮತ್ತು ಷೆಲ್ಟರ ಹಾಕಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಆ) ಸರಿಯಾದ ರಸ್ತೆ ಸೌಕರ್ಯವಿಲ್ಲದಿರುವುದರಿಂದ ಬಸ್ಸುಗಳು ನಿಲ್ದಾಣಕ್ಕೆ ಬಾರದೇ ಹಾಗೆಯೇ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇದೆ.

ಆ) ಬಂದಿದೆ.

ಬ್ರಹ್ಮಾವರದಲ್ಲಿ ಪದವಿ ಶಿಕ್ಷಣ ವಿಜ್ಞಾನ ತರಗತಿಗಳಿಗೆ ಮಂಜೂರಾತಿ ಕೋರಿರುವ ಬಗ್ಗೆ

2865 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ರಹ್ಮಾವರ ಪರಿಸರದ ವಿದ್ಯಾರ್ಥಿಗಳು ವಿಜ್ಞಾನ ವಿಭಾಗದಲ್ಲಿ ಪದವಿ ಪಡೆಯಲು ದೂರದ ಉಡುಪಿ ಅಥವಾ ಕುಂದಾಪುರಗಳನ್ನು ಅವಲಂಬಿಸುರುವುದು, ಇದರಿಂದ ಶಿಕ್ಷಣಾರ್ಥಿಗಳಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಶಿಕ್ಷಣ ಇಲಾಖೆಯವರು ಅಲ್ಲಿ ಸರ್ಕಾರಿ ವಿಜ್ಞಾನ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದೆಯೇ?

ಇ) ಬ್ರಹ್ಮಾವರದಲ್ಲಿನ ಖಾಸಗಿ ವಿದ್ಯಾಸಂಸ್ಥೆಯು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಪದವಿ ವಿಭಾಗದಲ್ಲಿ ವಿಜ್ಞಾನ ತರಗತಿಗಳನ್ನು ತೆರೆಯಲು ಕೋರಿ ಶಿಕ್ಷಣ ಇಲಾಖೆಗೆ ಮನವಿ ಸಲ್ಲಿಸಿದೆಯೇ?

ಈ) ಸಲ್ಲಿಸಿದಲ್ಲಿ ವಿದ್ಯಾರ್ಥಿಗಳ ಹಿತರಕ್ಷಣೆಯನ್ನು ಗಮನದಲ್ಲಿಟ್ಟು ಈ ವಿದ್ಯಾಸಂಸ್ಥೆಗೆ ಅನುಮತಿ ನೀಡಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.

ಆ) ಸದ್ಯದಲ್ಲಿ ಸರ್ಕಾರದ ಮಟ್ಟದಲ್ಲಿ ಯಾವುದೇ ಪ್ರಸ್ತಾವನೆ ಇಲ್ಲ.